ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಮಹಮ್ಮದ್ ಸೈದ್‌ಸಾಬನ ವಿಷಯದಲ್ಲಿ—

ಸ್ ೧೮೮೯ನೇ ಇಸವಿ ದಿವಾಳಿ ಕೇಸ್ ನಂಬರು 401.

ಹಕುಂ

ಮೇಲ್ಕಂಡ ಮಹಮ್ಮದ್‌ಸೈದ್‌ಸಾಬನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂ ಬರೂ ಅರ್ಜೀದಾರನಾದ ಮಹಮ್ಮದ್‌ಸೈದ್‌ಸಾಬನ ಖುದ್ದು ಹಾಜರಿಯನ್ನು ಮತ್ತು ಸದರೀಯವನ ಲೇಣೇದಾರ್‌ರಾದ ಇವರಿಗೂ ದರ್ಖಾಸ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಖಾಸ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ, 1ನೇ ಅಮರುರ್ದಿ ಖಾ ಸಾಹೇಬ್ 2ನೇ ಮಹಮ್ಮದಲ್ಲಿ ಖಾ ಸಾಹೇಬ್, 3ನೇ ಸಾಲಾರ್‌ಸಾಬ್, 4ನೇ ಬಡದಿ 5ನೇ ಮಹಮ್ಮದ್ ಫೀರ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಹಮ್ಮದ್ ಸೈದ್‌ಸಾಬನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ಲೇಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಜೂನ್ 18ನೇ ತಾರೀಖಿನಲ್ಲಿ ಈ ಕೋರ್ಟುಮೊಹರಿ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್‌ರ ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಉಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಮೈಸೂರಲ್ಲಿ ಇರುವ ಮಹಮ್ಮದಲ್ಲಿಖಾ ..	133—12—2	..	ಡಿಕ್ರೀ ಬಾಬತು.	

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರಲ್ಲಿ ಇರುವ ಮ್ಯುನಿಸಿಪಲ್ ಬೋರ್ಡು ಜವಾನ ಹುಚ್ಚನ ವಿಷಯದಲ್ಲಿ—

ಸ್ ೧೮೯೦ನೇ ಇಸವಿ ದಿವಾಳಿ ಕೇಸ್ ನಂಬರ್ 124.

ಹುಕುಂ

ಮೇಲ್ಕಂಡ ಜವಾನ ಹುಚ್ಚನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಹುಚ್ಚ ಖುದ್ದು ಹಾಜರಿಯನ್ನು ಮತ್ತು ಸದರೀಯವನ ಲೇಣೇದಾರ್‌ರಾದ 3ನೇ ವೀರಭದ್ರಯ್ಯ 5ನೇ ಜವಾನ ಶಿದ್ದ, ಖುದ್ದು ಹಾಜರಿ ಇವರಿಗೂ ದರ್ಖಾಸ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಖಾಸ್ತು ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—1ನೇ ರಘುನಾಥಗಿರಿಗೋಸಾಯಿ 2ನೇ ಬೊಮ್ಮಯ್ಯ 4ನೇ ಶ್ರೀರಾಂಚಂದ್ರ ಬ್ಯಾಂಕ್ ಯೇಜಂಟ್ 6ನೇ ಮೈಸೂರು ರಾಜಧಾನಿಬ್ಯಾಂಕ್ ಯೇಜಂಟ್ 7ನೇ ಮೈಸೂರು ಸರ್ವಜನ ವರ್ಧನಿ ಬ್ಯಾಂಕ್ ಯೇಜಂಟ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಬೋರ್ಡು ಜವಾನ ಹುಚ್ಚನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ಲೇಸ್ತರವಾಗಿಯಾಗಲಿ ದಸ್ತಗಿರೀ

ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ಯ 1890ನೇ ಇಸವಿ ಜೂ್ 18ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಜಿಲ್ಲೆಲಗೆ.	ಯಾವಾಗ ದೇಣಿ ಕೊಡಬೇಕು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಮೈಸೂರು ದೊಡ್ಡ ಪ್ಯಾಟೆಯಲ್ಲಿರುವ ರಘುನಾಥಗಿರಿ ಗೋಸಾಯಿ ..	35 0 0	..	ಡಿಕರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 24ನೇ ಜೂ್ 1890.

ಮೈಸೂರು ಡಿಸ್ಟ್ರಿಕ್ಟ್ಗೆ ಕೀರಿದ ತಾಲ್ಲೂಕುಗಳಿಂದ ಈ ಕೆಳಗೆ ಅದರದರ ಬಾಜೂದಲ್ಲಿ ಕಂಡ ಕೋಠಿಗಳಿಗೆ ಐ್ ಬಣಸಂದಲ್ ಮರಗಳನ್ನು ಬೇರು ಸಹಿತವಾಗಿ ಭೂಮಿಯಿಂದ ಕೀಳಿಸಿ ತಯಾರ್ಮಾಡಿಸಿ ರವಾನೆ ಮಾಡತಕ್ಕ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

2. ತಮ್ಮಾಂ ದರಖಾಸ್ತುಗಳ ಮೇಲೆ "ಬಣ ಸಂದಲ್ ಮರಗಳನ್ನು ಬೇರು ಸಹಿತವಾಗಿ ಭೂಮಿಯಿಂದ ಕೀಳಿಸಿ ತಯಾರ್ಮಾಡಿಸಿ ಕೋಠಿಗೆ ರವಾನಿಸತಕ್ಕ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರಿಯಬೇಕು.

3. ಇಂಥಾ ದರಖಾಸ್ತುಗಳು 1890ನೇ ಇಸವಿ ಜುಲೈ ತಾರೀಖು 20ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ಸು ಫಾರೆಸ್ಟುಗಳ ಅಸಿಸ್ಟೆಂಟ್ ಕ್ಯಸರ್ವೇಟರ್ ಸಾಹೆಬರವರಿಂದ ತೆಗದುಕೊಳ್ಳಲ್ಪಡುವವು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತು ಮಂಜೂರಾದ ಬಗ್ಗೆ ತಾನು ಬರದುಕೊಡುವ ಮುಚ್ಚಳಿಕೆ ಮೇರೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ್ ತಾಲ್ಲೂಕು 1ಕ್ಕೆ 50ರ ಲಾಗಾಯತು 100 ರೂಪಾಯಿಗಳ ವರಿಗೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡತಕ್ಕದ್ದು.

5. ಇಂಥಾ ಸಂದಲ್ ತಯಾರಿಯು ಸಂದಲ್ ಮಣೇಗಾರ್ರುಗಳ ತಿಳುವಳಿಕೆ ಬಗ್ಗೆ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರಿಂದ ಫಾಯಿಷ್ ಆಗಿರುವ ಸಂದಲ್ ಮ್ಯಾನ್ಯೂಲ್ನಲ್ಲಿ ಕಂಡಂತೆ ಇರಬೇಕು.

6. ದರಖಾಸ್ತುದಾರರು ಮೇಲ್ಕಂಡ ಕೆಲಸವನ್ನು ನಡಿಸುವದಕ್ಕಾಗಿ ಬಂದು ಅಥವಾ ಜಾಸ್ತಿ ತಾಲ್ಲೂಕುಗಳನ್ನು ಅಪೇಕ್ಷಿಸಿದಲ್ಲಿ ಈ ಕೆಳಗೆ ಕಂಡಮೇರೆ ಬಂದೊಂದು ತಾಲ್ಲೂಕಿಗಾಗಲಿ ಅಥವಾ ಅದರ ಬಂದು ಭಾಗಕ್ಕಾಗಲಿ ಬೇರೆಬೇರೆ ದರಖಾಸ್ತುಗಳನ್ನು ರವಾನಿಸಬೇಕು.

7. ಪ್ರತಿ ಒಬ್ಬ ದರಖಾಸ್ತುದಾರನು ತನ್ನ ದರಖಾಸ್ತಿನಲ್ಲಿ ಈ ಕೆಳಗೆ ಕಂಡ ತಾಲ್ಲೂಕುಗಳಿಂದಲಾಗಲಿ ಅದರ ಬಂದುಭಾಗದಿಂದಲಾಗಲಿ ಮರಗಳನ್ನು ಬೇರುಸಹಿತ ಕೀಳಿಸಿ ತಯಾರ್ಮಾಡಿಸಿ ಕೋಠಿಗೆ ರವಾನೆ ಮಾಡಲು ಒಪ್ಪಿಕೊಳ್ಳುವ ಕಮ್ಮಿ ದರವನ್ನು ದರಖಾಸ್ತಿನಲ್ಲಿ ನಮೂದಿಸಬೇಕು.

8. ಈ ಮೇರೆ ಕಂಟ್ರಾಕ್ಟುದಾರ್ರಿಂದ ಕೋಠಿಗೆ ಕಳುಹಿಸಲ್ಪಡುವ ಸಂದಲ್ನಲ್ಲಿ ಇಲಾಖಾ ಹುಕುಂ ಮೇರೆ ಶೇಕಡಾ 10 ರ್ಟ್ ಪ್ರಕಾರ ಅರವಾಸೀ ಮತ್ತು ಕಮ್ಮಿ ಭರ್ತಿಗಾಗಿ ವಜಾ ಮಾಡಲ್ಪಡುವದು.

9. ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್ವೇಟರ್ ಸಾಹೆಬರವರು ಕಮ್ಮಿ ದರದ ಅಥವಾ ಮತ್ಯಾವ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೂ ಮತ್ತು ತಿರಸ್ಕರಿಸಿದ್ದಕ್ಕೆ ಯಾವ ಕಾರಣಗಳನ್ನು ಕೊಡುವದಕ್ಕೂ ಬದ್ಧರಾಗಿರುವದಿಲ್ಲ, ಇಂಥಾ ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿದೆ.

10. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಇನ್ನೂ ಜಾಸ್ತಿ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕ್ಯಸರ್ವೇಟರ್ ಸಾಹೆಬರವರ ಹೆಡ್ ಕ್ವಾರ್ಟರ್ ಆಫಿಸಿನಲ್ಲಾಗಲಿ ಅಥವಾ ಸರ್ಕ್ಯೂಟ್ ಮೊಕ್ಕಾಂಗಳಲ್ಲಾಗಲಿ ತಿಳಿದುಕೊಳ್ಳಬಹುದು.

11. ದರಖಾಸ್ತುದಾರರು ಇಷ್ಟವಿದ್ದರೆ 1890ನೇ ಇಸವಿ ಜುಲೈ 21ನೇ ತಾರೀಖು ಸೋಮವಾರ ದಿವಸ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕ್ಯಸರ್ವೇಟರವರ ಆಫಿಸಿಗೆ ಬಂದು ಹಾಜರಾಗಬಹುದು, ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರು ಜುಲೈ 25ನೇ ತಾರೀಖಿನ ಒಳಗಾಗಿ ಮುಚ್ಚಳಿಕೆಯನ್ನೂ ಬರದುಕೊಡಬೇಕಲ್ಲದೆ ತೇವಣಿಯನ್ನೂ ಸಹ ಕಟ್ಟಬೇಕು.